# ಕನ್ನಡ ಬಳಗ, ಯು.ಕೆ.

## ಮ್ಯಾಂಚೆಸ್ಟರ್‌ನಲ್ಲಿ ನಡೆಸಿದ ವಿಶ್ವಕನ್ನಡಿಗರ ಸಮ್ಮೇಳನದ ........










# ನೆನಪುಗಳು

Umist - Manchester - U.K. 27-29 Aug 1988.



ಸಮ್ಮೇಳನದ ಅಂಗವಾಗಿ ನಡೆದ ವಸ್ತುಪ್ರದರ್ಶನವನ್ನು ಮೆಂಚೆಸ್ಟರ್‌ನ ಲಾರ್ಡ್ ಮೇಯರ್ ಪೆಟ್ರೀಷಿಯ ಕಾನ್‌ಕ್ವೆಸ್ಟ್ ಅವರು ಉದ್ಘಾಟಿಸಿದರು. ಶ್ರೀಗಳಾದ ಗುರುಮಲ್ಲೇಶ್, ರಾಮಮೂರ್ತಿ, ಅರವಿಂದ ಕುಲಕರ್ಣಿ, ಎಂ.ಪಿ. ಪ್ರಕಾಶ್ (ಸಚಿವರು) ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಕಾಣಬಹುದು.



ವೇದಿಕೆಯ ಮೇಲೆ ಶ್ರೀಗಳಾದ ಕಾನ್‌ಕ್ವೆಸ್ಟ್, ಶ್ರೀಮತಿ ಭಾನುಮತಿ (ಅಧ್ಯಕ್ಷರು, ಕನ್ನಡ ಬಳಗ, ಯು.ಕೆ.) ಮುಖ್ಯ ಅತಿಥಿಗಳು, ಶ್ರೀ ಬೊಮ್ಮಾಯಿ, ಶ್ರೀ ಎಂ.ಪಿ. ಪ್ರಕಾಶ್, ಶ್ರೀ ಶಿವರಾಮಕಾರಂತ.



ಸಮ್ಮೇಳನದ ಸ್ವಾಗತ ಗೀತೆ 'ಹಚ್ಚೇವು ಕನ್ನಡದಾ ದೀಪ' ಯು.ಕೆ. ಕನ್ನಡ ಬಳಗದ ಸದಸ್ಯರಿಂದ.

With Best Compliments From:

KANNADA BALAGA U.K.

ಸಂಪಾದಕರ ಸಂವಾದ



# ಪೂರ್ವ-ಪಶ್ಚಿಮದ ನಡುವೆ ಸೇತುವೆ

ಶೈಶಾವಸ್ಥೆಯಲ್ಲಿರುವ ಕನ್ನಡಬಳಗವು, ಧನಸಹಾಯವಾಗಲೀ, ಅನುಭವವಾಗಲೀ ಇಲ್ಲದಿದ್ದಾಗ್ಯೂ ಇಂತಹ ಮಹಾತ್ಕಾರ್ಯವಾದ — ವಿಶ್ವ ಕನ್ನಡಿಗರ ಸಮ್ಮೇಳನವನ್ನು ಯಶಸ್ವಿಯಾಗಿ ಜರುಗಿಸಿದುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ನಮ್ಮ ದೃಢ ಉದ್ದಿಶ್ಯವನ್ನು ಮೂಲಗ್ರಹಿಸಿ ಪ್ರತಿಕ್ರಿಯಿಸಿದ ಮಾಜಿ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಸಂಪೂರ್ಣ ಬೆಂಬಲದಿಂದ ಮತ್ತು ವಾರ್ತಾ ಮತ್ತು ಸಂಸ್ಕೃತಿಯ ಮಂತ್ರಿ ಶ್ರೀಮಾನ್ ಪ್ರಕಾಶ್‌ರವರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಯಿತು. ಬ್ರಿಟನ್ ಮತ್ತು ಇತರ ದೇಶಗಳಿಂದ ಭಾಗವಹಿಸಿದ ಕನ್ನಡಿಗರುಗಳಿಂದ ಸಮ್ಮೇಳನವು ಶೋಭಿತವಾಯಿತು. ನಮ್ಮ ಸದಸ್ಯರು ಹಗಲಿರುಳೂ ದುಡಿದು ಸಮ್ಮೇಳನವನ್ನು ಯಶಸ್ವಿಗೊಳಿಸಲು ಕಾರಣಕಾರಿಯಾದರು.

ಸಮ್ಮೇಳನದ ನಾಲ್ಕು ಉದ್ದಿಶ್ಯಗಳನ್ನು ಸಾಧಿಸುವುದೇ ಅಲ್ಲದೆ ಮತ್ತು ಕೆಲವು ಅಂಶಗಳು ಅರಿವಾಗಿವೆ. ಕನ್ನಡಬಳಗದ ಹೆಸರು ಪ್ರಪಂಚದ ನಾಲ್ಕು ಕಡೆ ಹರಡಿರುವುದರಿಂದ ಮುಂದೆ ಯಾವ ಕಾರ್ಯಗಳಿಗೂ ಉತ್ತೇಜನ ದೊರಕುವ ಭರವಸೆಯಿದೆ.

ವಿಶ್ವದ ನಾನಾ ಎಡೆಗಳಿಂದ ಬಂದ ಜನಗಳಲ್ಲಿ ಮತ್ತು ಇಲ್ಲೇ ತಂಗಿರುವ ಹಿರಿಯ ಮತ್ತು ಕಿರಿಯ ಕನ್ನಡಿಗರಲ್ಲಿ ಸ್ನೇಹ ಭಾಂದವ್ಯ ಬಹಳ ಗಾಢವಾಗಿದೆ. ಅದರಲ್ಲೂ ತಮ್ಮ ಸಂಬಂಧಿಕರಿಂದ ದೂರದಲ್ಲಿರುವ ಕಿರಿಯರಲ್ಲಿ ಭಾಂದವ್ಯದ ವಾತ್ಸಲ್ಯ ಆಳವಾಗಿದೆ.

ಕನ್ನಡನಾಡಿನ ಸಂಪದ್ಭರಿತ ನಡೆ ನುಡಿ ಸಂಸ್ಕೃತಿ ಮತ್ತು ಪ್ರಾಚೀನ ವೈಭವಗಳ ರುಚಿ, ಮೊದಲಬಾರಿಗೆ ವಿದೇಶದಲ್ಲಿ ಪ್ರದರ್ಶಿಸಲ್ಪಟ್ಟು ಪಾಶ್ಚಿಮಾತ್ಯ ಜನರಲ್ಲಿ ಕುತೂಹಲವನ್ನು ಕೆರಳಿಸಿದೆ. ಕರ್ನಾಟಕದಲ್ಲಿ ಪ್ರವಾಸ ಮತ್ತು ಉದ್ಯಮಗಳನ್ನು ಉತ್ತೇಜನಗೊಳಿಸುವುದಕ್ಕೆ ಇದೊಂದು ದಾರಿ.

ಇಂಡಿಯಾ ಮತ್ತು ಆಂಗ್ಲದೇಶಗಳ ನಡುವೆ ಕಟ್ಟಿದ ಈ ಸೇತುವೆಯನ್ನು ಇನ್ನೂ ಸ್ಥಿರಗೊಳ್ಳುವಂತೆ ಈ ರೀತಿಯ ಕಾರ್ಯಕ್ರಮಗಳನ್ನು ವಿದೇಶದ ಎಲ್ಲೆಲ್ಲೂ ಜರುಗಿಸಿ ಕರ್ನಾಟಕದ ಬಾವುಟವನ್ನು ಮೇಲೇರಿಸಬೇಕೆಂಬ ಹೆಬ್ಬಾಸೆ.

ಸಮ್ಮೇಳನದ ಅನುಭವಗಳನ್ನು ವರ್ಣಿಸಲಸಾಧ್ಯ. ನಮ್ಮೆಲ್ಲರಿಗೂ ಅದೊಂದು ಸಿಹಿ ಕನಸು. ಸಮ್ಮೇಳನದ ವಾರ್ಷಿಕೋತ್ಸವವನ್ನು ಆಚರಿಸಲೋಸುಗ ನಮ್ಮ ಸವಿ ನೆನಪುಗಳನ್ನು ಮೆಲುಕು ಹಾಕಲು ಈ ಸ್ಮರಣ ಸಂಚಿಕೆಯ ಮೂಲಕ, ಸಮ್ಮೇಳನದಲ್ಲಿ ಭಾಗವಹಿಸಿದ ಸದಸ್ಯರುಗಳೆಲ್ಲರನ್ನೂ ಮತ್ತೊಮ್ಮೆ ಮಾನಸಿಕವಾಗಿಯಾದರೂ ಒಂದುಗೂಡಿಸಬೇಕೆಂಬುದು ನಮ್ಮ ಉದ್ದಿಶ್ಯ.

ಈ ಸ್ಮರಣ ಸಂಚಿಕೆಯನ್ನು ಹೊರತರಲು ಸಹಾಯ ಮಾಡಿದ ಎಲ್ಲಾ ಸದಸ್ಯರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಧನ್ಯವಾದಗಳು.

ತಮ್ಮ ಸಹೋದರಿ

ಭಾನುಮತಿ

(ಅಧ್ಯಕ್ಷಿಣಿ: ಯು.ಕೆ. ಕನ್ನಡಬಳಗ)

NEW DELHI

August 25th 1988

सत्यमेव जयते



# PRIME MINISTER OF INDIA


## MESSAGE

Indians travelling and working abroad have contributed handsomely to the country of their domicile and at the same time presented to the foreigners the great Indian heritage, the achievements and the aspiration of the people of this country. India has always tried to build its international relationships on the basis of a mutual understanding and respect of each others political, cultural and social traditions.

The International Kannada Conference will project the rich cultural heritage of Karnataka outside India. In our own country Kannada has been a vehicle of regional and communal amity. Historically, the language has contributed to the growth of Indian civilization, literature and thought. Our effort is to further develop our regional languages to meet the requirements of the modern scientific age.

I send my good wishes for the success of the International Kannada Conference being organised by the U.K. Kannada Balaga in August 1988 at Manchester.

**Rajiv Gandhi**



'KRITIKA'

BANGALORE-560 080

19TH OCTOBER 1988

**MESSAGE**

Dear Dr. Bhanumathi,

I am grateful to you and other friends for your letter of 5th September 1988 with a lovely gift sent through Shri M.P. Prakash which I received yesterday. You know I was very keen to attend the Vishwa Kannada Sammelana but because of political developments I thought that the new Chief Minister should inaugurate it. I am very happy to know that the Sammelana was a great success. You deserve the credit for having organized it with determination even though there were many problems. Please accept my congratulations and convey my best wishes to all your friends who helped and cooperated to make the Sammelana a success.


Kannadigas abroad on account of their hard work have earned considerable credit in the countries they live. While it is necessary to learn many things from the society they live in they cannot forget their motherland because their roots are here. They should also project even in their unofficial capacity the rich heritage and culture of Karnataka and India so that many misunderstandings and misconceptions entertained by foreigners about our country can be removed.

With all best wishes,

Yours sincerely,

Ramakrishna Hegde

(RAMAKRISHNA HEGDE)



# Gist of the speech delivered by Sri J. H. Patel

**Hon'ble Minister for Industries & Power**

The honourable minister, during his visit to the United Kingdom took this golden opportunity to explain about the general Industrial climate prevailing in Karnataka. He appealed to the Kannadigas, in particular to invest in industrial establishments within the state. He offered the required assistance like the allotment of lands, power, etc., to the NRI's in order to facilitate the establishment procedures of various industries. The honourable minister asked the NRI's and all the other dignitaries residing all over the Globe to support the Karnataka Government's venture and thereby avail this unique opportunity.

---

ವಿಚಾರ ವಿನಿಮಯ ಗೋಷ್ಠಿ ಸಮಯದಲ್ಲಿ





1



2

1. ಸಮ್ಮೇಳನದ ಉದ್ಘಾಟನೆ — ದೀಪವನ್ನು ಬೆಳಗುತ್ತಿರುವುದು ಕಾರ್ಯದರ್ಶಿ **ಡಾ|| ಅಭಯಾಂಬಾ ಮೂರ್ತಿ**

**2. ವಸ್ತು ಪ್ರದರ್ಶನಾಲಯದಲ್ಲಿ ಶ್ರೀಗಳಾದ ಸಾಲಿಮಠ್, ನಟ ಶಂಕರ್‌ನಾಗ್, ಸಿ.ವಿ.ಎಲ್. ಶಾಸ್ತ್ರಿಮತ್ತು ಎಸ್. ಕೃಷ್ಣಮೂರ್ತಿ**

3. ಕ್ರೀಡಾ ದಿನದ ಪ್ರಶಸ್ತಿ ವಿತರಣೆ, ಶ್ರೀ ಜಿ.ಆರ್. ವಿಶ್ವನಾಥ್, ನಟ ಶ್ರೀನಾಥ್

4. ಶ್ರೀಮತಿ ಪ್ರಭಾ ಅಪ್ಪಾಜಿ ಅವರಿಗೆ ಕುಮಾರಿ ಮೀರಾಶೆಟ್ಟಿ ತಂಡದವರಿಂದ ಪುಷ್ಪಗುಚ್ಛ ಸಮರ್ಪಣೆ.

5. ಸಮ್ಮೇಳನ ಸ್ಮರಣಸಂಚಿಕೆಯ ಸಂಪಾದಕ ಡಾ|| ಪ್ರಕಾಶ್‌ನಾಯಕ್.

3



4




5



# VISHWA KANNADIGARA SAMMELANA

By - Dr. C.R. Jayachandra
V. Jagannath

Kannada Balaga U K is a crowning glory to the state of Karnataka. The enthusiasm of the Kannadiga's who launched on the marathon task of hosting first ever Vishwa Kannadigara Sammelana outside India, at the UMIST, Manchester, calls for a very high commendation indeed. However, the daunting task of convening such a grand scale Sammelana was the effort of a very small group of enthusiastic members of the Kannada Balaga, spearheaded by the fully committed president Dr. K.S. Bhanumathi. To make matters worse, promised assistance from the Karnataka Government was not confirmed in writing till the last stages of the proceedings.

The main theme of such a Sammelana was to create a cordial and friendly atmosphere for friends and strangers from similar cultural background residing outside India, to meet and reminisce the good old times back at home. On this count, the Sammelana was undoubtedly a superb occasion and highly successful arena.

Equally important objective was to introduce the youngsters to experience first hand, the rich culture and heritage of Karnataka and some aspects of our historical background and achievements. What real impression it made, if any, on some of the youngsters, is very debatable.

The two day Sammelana on 27th and 28th August, was very well attended by about 500 delegates on each of those days, coming from several countries and the biggest contingent being from the United Kingdom. Some of the professional artists from the State of Karnataka were rather medicore, but for the children who performed the Yakshagana, who stole the limelight and left an indelible impression on the appreciative audience, with uncanny performance.

The third day: Festival day, was also well attended and it should have been an excellent day for the local Mancunians, a superb opportunity taste appreciate Karnataka culture, architecture and heritage and also taste traditional food. The exhibition display organized by the karnataka Government was very well presented and highly informative. Unfortunately, the Festival was not given the full publicity it deserved and also not enough organisation to guide those few locals, who made an effort to come. The Yoga demonstration by the pupils of Mr. B.K.S. Iyengar, the foremost exponent of Yoga, somehow lacked the zeal and enthusiasm.

Some of the highlights of the programme were the talk by Dr. Shivrama Karanth on the heritage of Karnataka and its glorious past which was of very high calibre, but was not easily understood by all the delegates. A brief talk on the Karnataka temple architecture, by Mr. Adam Hardy, School of Architecture, Birmingham, explaining, with sketches and photographs in very simple language, the entire development of South Indian temple architecture, was highly appreciated and understood by one and all, including the youngsters. Various individual classical dances performed by both professional and amateur artists from U.K., Europe, U.S.A. and India, were good soothing interludes in a long haul of a not too impressive cultural programme. Undoubtedly, the highlight of the entire cultural programme was the electrifying Yakshagana.

The "Open Forum", which was meant to involve all age groups and the only programme where the youngsters should ha ve been given the opportunity

to express their views, was unashamedly misused. Many on the panel were disgrace and incapable of answering questions, even on their own professional subject.

Some of the distinguished guests representing Karnataka Government, who were supposed to have come specially for the Sammelana, showed very little interest in the proceedings and when it was their turn to address the Sammelana, they were not even available. This type of total let down, forced the programme committee to arrange hurriedly an alternative session in the form of a Video-film, which was even more disaustrous. Instead of seeing a good educative documentary type of film, everyone was forced to see a film about drugs, corruption, immoral aspects of political greed and cover-up. This film had no relevance whatsoever to the Sammelana. On the contrary, it was very damaging to our unexposed and innocent young delegates.

It was a highly professional approach to the release of the commemorative souvenir, the issue of smart delegate badges and the conference folders. The contents of the souvenir did not have a sufficient number of articles of depth and relevance to the Sammelana. The unnecessary prominence given to some people in the souvenir was indicative of pettiness and lack of dignity.

Inspite of some of these criticisms, the conduct of the proceedings of the Sammelana was relaxed and friendly. It was an excellent venture for all the adult Kannadigas, probably not such a good conference for some of the youngsters. A small group of people worked really hard and unselfishly, to make the Sammelana a great success and without their dedicated effort there would not have been a Sammelana. All the delegates and the artists were full of praise for the organizers of the Sammelana and Kannada Balaga U.K.

With this experience gained in the first ever Vishwa Kannadigara Sammelana, future conferences should be smooth sailing. We wish and hope that this is only the beginning and many more conferences like this would be undertaken by the Kannada Balaga U.K., in years to come.

ಕವಿಗೋಷ್ಠಿಯ ಸಮಯದಲ್ಲಿ



# ಒಂದು ಸವಿನೆನಪು

ಐದು ತಿಂಗಳ ಹಿಂದೆ ಮ್ಯಾಂಚೆಸ್ಟರಿನಲ್ಲಿ ಕನ್ನಡ ಬಳಗ (ಯು.ಕೆ.) ನಡೆಸಿದ ವಿಶ್ವಕನ್ನಡಿ ಸಮ್ಮೇಳನದಲ್ಲಿ ಭಾಗವಹಿಸಿ ಅಲ್ಲಿಂದ ಮನಸ್ಸಿನಲ್ಲಿ ತುಂಬಿ ತಂದ ನೆನಪುಗಳ ಸವಿಯನ್ನು ಮತ್ತೆ ಮೆಲುಕು ಹಾಕುವ ಅವಕಾಶ ದೊರಕಿತು. ಸೋದರಿ ಭಾನುಮತಿಯವರು ಅಲ್ಲಿಂದ ಫೋನ್ ಮಾಡಿ ಈ ಲೇಖನವನ್ನು ಕೇಳಿದಾಗ, ನನಗೆ ಈ ಅವಕಾಶ ಇತ್ತುದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು.

ದೇಶದಿಂದ ದೇಶಕ್ಕೆ ಹೋಗಿ ನಮ್ಮವರನ್ನು ಕಂಡು ಅವರೊಂದಿಗೆ ಕಲೆತು ಸ್ನೇಹ ಸೌಹಾರ್ದಗಳನ್ನು ಅನುಭವಸುವುದು ಮನಸ್ಸಿನಲ್ಲಿ ಬಹು ಕಾಲ ನಿಲ್ಲುವಂಥ ಸಂತೋಷ. ಕನ್ನಡ ಬಳಗ ಅಂಥ ಸಂತೋಷದ ಸಂದರ್ಭ ಒದಗಿಸಿಕೊಟ್ಟಿತು. ಸ್ಥಾಪನೆಯಾದ ಐದು ವರ್ಷಗಳಲ್ಲಿಯೇ ಇಂಥ ದೊಡ್ಡ ಉದ್ಯಮಕ್ಕೆ ಕೈಹಚ್ಚಿ ಅದನ್ನೂ ಬಹುಮಟ್ಟಿಗೆ ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ಬಳಗದ ಕಾರ್ಯಗರ್ತರಿಗೂ ಸದಸ್ಯರಿಗೂ ಅಭಿನಂದನೆ ಸಲ್ಲಬೇಕು.

ಯು.ಕೆ. ಯಲ್ಲಿ ಭಾರತೀಯರು ದಟ್ಟವಾಗಿ ನೆಲಸಿರುವುದರಿಂದ ಕನ್ನಡ ಜನ ಇನ್ನೂ ಬಹಳ ಮಂದಿ ಇರಬಹುದು ಎಂದು ಎಣಿಸಿದ್ದೆ . ಸಮ್ಮೇಳನದಲ್ಲಿ ನಾನು ಎಣಿಸಿದ್ದಷ್ಟು ಮಂದಿ ಕಾಣಲಿಲ್ಲ . ಹಾಗೂ, ಅಮೆರಿಕದಿಂದ ಹೋಗಿದ್ದ ಹಲವಾರು ಮಂದಿ, ಜೀನೀವಾದಿಂದ ಬಂದಿದ್ದ ಒಂದು ಕುಟುಂಬವನ್ನು ಬಿಟ್ಟರೆ, ಇತರ ದೇಶಗಳಿಂದ ಜನ ಬಂದದ್ದು ಕಾಣಲಿಲ್ಲ . ಬಂದಿದ್ದರೂ ಅದು ತಿಳಿಯುವ ಅವಕಾಶ ಇರಲಿಲ್ಲ . ಕಾರ್ಯಕರ್ತರಲ್ಲಿ ಬಹುಮಟ್ಟಿಗೆ ಎಲ್ಲರೂ ವೈದ್ಯ ವೃತ್ತಿಯಲ್ಲಿರುವವರು. ಇನ್ನೂ ಶೈಶವದಲ್ಲಿರುವ ಬಳಗದ ಕರೆ ಇತರ ಕಾರ್ಯಕ್ಷೇತ್ರಗಳಲ್ಲಿರುವ ಕನ್ನಡಿಗರನ್ನು ಇನ್ನೂ ಮುಟ್ಟಿಲ್ಲವೇನೋ ಎನ್ನಿಸಿತು.

ಈ ಸಮ್ಮೇಳನಕ್ಕೆ ಕರ್ನಾಟಕ ರಾಜ್ಯ ಸರ್ಕಾರದಿಂದ ಬಹುಮಟ್ಟಿನ ಬೆಂಬಲ ಸಹಾಯ ದೊರಕಿತು. ಮಂತ್ರಿಗಳನ್ನಷ್ಟೇ ಅಲ್ಲದೆ, ಸರ್ಕಾರ ಅನೇಕ ಉತ್ತಮ ಕಲಾವಿದರನ್ನೂ ಶ್ರೇಷ್ಠ ಸಾಹಿತಿಯೊಬ್ಬರ ಕಲಾ ಪ್ರದರ್ಶನವನ್ನೂ ಕಳಿಸಿ ಕೊಟ್ಟಿದ್ದಿತು. ಬಹು ದಿನದಿಂದ ಹೊರಗೆ ನೆಲಸಿದ ಕನ್ನಡಿಗರಿಗೆ ಅಲ್ಲಿಂದ ಬಂದ ಕಲಾವಿದರ ಕೌಶಲವನ್ನು ಕಂಡು ಹರ್ಷಿಸುವ, ಅವರ ಪ್ರಗತಿಯನ್ನು ಕಂಡು ಮೆಚ್ಚುವ ಅವಕಾಶ ದೊರಕಿತು. ಅಲ್ಲಿಂದ ಬಂದವರ ಕಾರ್ಯಕ್ರಮಗಳಲ್ಲಿ ಬಹು ಯಶಸ್ವಿಯಾದವುಗಳೆಂದರೆ ನಾಟ್ಯದರ್ಪಣ ಸಂಸ್ಥೆಯವರ ನಾಟಕ ಸಿಕ್ಕು (ದಿಗ್ದರ್ಶನ: ಶ್ರೀನಿವಾಸ ಪ್ರಭು), ಸಾಲಿಗ್ರಾಮದ ಮಕ್ಕಳ ಮೇಳದವರ ಯಕ್ಷಗಾನ ('ವೀರ ವೃಷಸೇನ', ಮತ್ತು 'ದ್ರುಪದ ಬಂಧನ'), ಮತ್ತು ರಾಘವೇಂದ್ರರ ಕೈ ಬೆರಳ ನೆರಳ ಪ್ರದರ್ಶನ ('ಬೆರಳು-ನೆರಳು'). ಇವಲ್ಲದೇ ಅಶ್ವತ್ಥ್ ಮತ್ತು ರೋಹಿಣಿ ನಾಗರಾಜ್‌ರವರ ಸುಗಮ ಸಂಗೀತ, ಛೋಟೆ ರಹಮತ್ ಖಾನರ ಸಿತಾರ್ ಇವುಗಳೂ ಚೆನ್ನಾಗಿದ್ದುವು. ಶಂಕರನಾಗರ ಚಲನಚಿತ್ರ Accident ಬಹಳ ಜನರನ್ನು ಆಕರ್ಷಿಸಿತು. ಕಲಾಪ್ರದರ್ಶನದಲ್ಲಿ ಬೊಂಬಾಯಿನ ತರುಣ ಕನ್ನಡ ಕಲಾವಿದ ದಿವಾಕರ ಅವರ ಲೋಹದ ಭಿತ್ತಿಗಳ ಕೆಲಸ ಅಪರೂಪವಾಗಿ ಕಂಡಿತು. ಅಮೆರಿಕದ ತ್ರಿವೇಣಿ ಸಂಘದ ಪರವಾಗಿ ಹೋದ L.G. ವಿಮಲ ರವರ ಜಾನಪದ ಹಾಡುಗಳ ಗಾಯನ ಅತ್ಯಂತ ಯಶಸ್ವಿಯಾದ ಕಾರ್ಯಕ್ರಮಗಳಲ್ಲಿ ಒಂದೆನ್ನಬಹುದು. ಪ್ರತಿ ಕಾರ್ಯಕ್ರಮದ ಬಗೆಗೂ ವಿವರವಾಗಿ ಬರೆಯುವ ಅವಕಾಶವಿಲ್ಲ . ಆದರೂ ಒಂದೆರಡು ಮಾತುಗಳನ್ನು ಹೇಳಬೇಕೆನಿಸುತ್ತದೆ. 'ಸಿಕ್ಕು' ನಾಟಕದಲ್ಲಿ ಅಭಿನಯ ಬಹು ಉನ್ನತ ಮಟ್ಟದ್ದು. ಎಲ್ಲ ನಟರೂ ಬಹಳ ಸಮರ್ಥವಾಗಿ ಅಭಿನಯಿಸಿದರು. ಸದಾಶಿವರ ಸಣ್ಣ ಕತೆಯೊಂದರ ಆಧಾರದ ಮೇಲೆ ರಚಿತವಾದ ಈ ನಾಟಕ ಸಮಾಜದ ಕೆಲವು ದುಷ್ಟಶಕ್ತಿಗಳು ಹೇಗೆ ಒಮ್ಮೊಮ್ಮೆ ಒಂದುಗೂಡಿ ಒಬ್ಬ ವ್ಯಕ್ತಿಯನ್ನು ಸಂಪೂರ್ಣವಾಗಿ (ತಾತ್ಕಾಲಿಕವಾಗಿಯಾದರೂ) ನಿರ್ಬಲನನ್ನಾಗಿ, ನಿಸ್ಸಹಾಯಕನಾಗಿ ಮಾಡಬಲ್ಲವು ಎಂಬುದನ್ನು ತೋರಿಸುತ್ತದೆ. (ಯಶವಂತ ಚಿತ್ತಾಲರ 'ಷಿಕಾರಿ' ನೆನಪಿಗೆ ಬರುತ್ತದೆ.) ಇಷ್ಟು ಉತ್ತಮವಾಗಿ ನಿರ್ವಹಿಸಿದ, ಅಭಿನಯಿಸಿದ ನಾಟಕ ಕಂಡು ಬಹಳ ದಿನವಾಗಿತ್ತು .. ಶ್ರೀನಿವಾಸ ಪ್ರಭು ರವರಿಗೂ, ನಟವರ್ಗದವರೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು. ಮಕ್ಕಳ ಮೇಳದವರ ಯಕ್ಷಗಾನ ಕೊಂಡಾಡುವಂಥ ಪ್ರದರ್ಶನ. ಯಕ್ಷಗಾನ ನಮ್ಮ ನಿಧಿ. ಅದನ್ನೂ ಚೆನ್ನಾಗಿ ಬಳಸಿ, ಬೆಳಸುತ್ತಿರುವ ಮಕ್ಕಳ ಮೇಳದವರಿಗೆ, ಆ ಮಕ್ಕಳನ್ನೂ ಅತ್ಯಂತ ಮಮತೆಯಿಂದ ತರಪೇತು ಮಾಡುತ್ತ, ಈ ಕಾರ್ಯಕ್ರಮಕ್ಕಾಗಿ ತಮ್ಮನ್ನೇ ಮುಡಿಪಿಟ್ಟಿರುವ ಆ ಮೇಳದ ದಿಗ್ದರ್ಶಕರು - ಇವರಿಗೆ ಎಷ್ಟು ಧನ್ಯವಾದ ಹೇಳಿದರೂ ಸಾಲದು. ವೃಷಸೇನನ ಪ್ರಕರಣದಲ್ಲಿ ಕರ್ಣನ ಮಗ ಅರ್ಜುನನ್ನೂ ಕಾಳಗದಲ್ಲಿ ಎದುರಿಸಲು ಸಿದ್ಧನಾಗಿ ತಾಯಿಯನ್ನೂ ಕಾಳಗಕ್ಕೆ ಹೋಗಲು ಅನುಮತಿ ಬೇಡಿದಾಗ ಅವಳು 'ಇನ್ನೂ ಕೆನ್ನೆಯ ಕೆಂಪು ಮಾಸಿಲ್ಲದ ಹಸುಳೆ ನೀನು' ಎನ್ನುತ್ತಾಳೆ. ಹೌದು, ಅದರಲ್ಲಿನ ಪಾತ್ರಧಾರಿಗಳೆಲ್ಲ ಅಂಥ ಕೆನ್ನೆಯ ಕೆಂಪು ಮಾಸಿಲ್ಲದ ಮುದ್ದು ಮಕ್ಕಳೇ. ಆದರೆ ರಂಗದ ಮೇಲೆ ಅವರು ಬಂದಾಗ ಮಾತ್ರ ಅವರ ವಯಸ್ಸು, ಅವರ ಚಿಕ್ಕ ಆಕಾರ, ಗಾತ್ರ, ಇದಾವುದೂ ಗಮನಕ್ಕೇ ಬರುವಂತಿರಲಿಲ್ಲ . ಅಷ್ಟು ಮನೋಹರವಾಗಿತ್ತು ಅವರ ಪ್ರದರ್ಶನ..... L.G. ವಿಮಲರವರ ಗಾಯನ ಸಹಜವಾಗಿಯೂ, ಸುಂದರವಾಗಿಯೂ ಇತ್ತು . ಕನ್ನಡ ಜಾನಪದ ಗೀತೆಗಳನ್ನು ಅವುಗಳ ಅಸಲೀಧಾಟಿಯಲ್ಲಿ ಹಾಡುವುದರಲ್ಲಿ ಹೆಸರಾದ L.G. ಸಹೋದರಿಯರಲ್ಲಿ ಒಬ್ಬರು ಅವರು. ಸಿನಿಮಾ ಸಂಗೀತದ ಕೆಟ್ಟ ಪ್ರಭಾವವಿಲ್ಲದ, ದೊಡ್ಡ ಹಿಮ್ಮೇಳದ ಗದ್ದಲವಿಲ್ಲದ, ಜಾನಪದ ಸಾಹಿತ್ಯದ ಹಾಗೂ ಸಂಗೀತದ ಸೊಬಗನ್ನೂ ಸ್ಫುರಿಸುವಂಥ ಅವರ ಗಾಯನ, ವಿಷಯಕ್ಕೆ ಹಿತಮಿತವಾದ ವ್ಯಾಖ್ಯಾನ, ಇವು ಜನರ ಮನಸ್ಸನ್ನೂ ನೇರವಾಗಿ ಹೋಗುವಂತಿತ್ತು . ಈ ಸಂದರ್ಭದಲ್ಲಿ ಒಂದು ಸೂಚನೆ: ಇಂಥ ಸಮಾರಂಭಗಳಲ್ಲಿ ಹಲವಾರು ಮಂದಿಗೆ ಪಕ್ಕವಾದ್ಯ ಬೇಕಾಗುತ್ತದೆ. ಎಲ್ಲರೂ ತಮ್ಮವರನ್ನು ತಾವೇ ಕರೆದುಕೊಂಡು ಬರುವುದು ಕಷ್ಟ. ಸಮ್ಮೇಳನದವರೇ ಪಕ್ಕವಾದ್ಯದವರನ್ನು ಒದಗಿಸುವ ಏರ್ಪಾಡು ಮಾಡುವುದು ಒಳ್ಳೆಯದು.

ಪ್ರಮುಖ ಕಾರ್ಯಕ್ರಮಗಳ ಪೈಕಿ ಅಲ್ಲಿ ನೆಲೆಸಿರುವ ಕನ್ನಡಿಗರಿಂದ ಯಾವುದೂ ಇರಲಿಲ್ಲವೆಂಬುದು ಸ್ವಲ್ಪ ಯೋಚಿಸಬೇಕಾದ ವಿಷಯ. ಕರ್ನಾಟಕದ ಸಂಪರ್ಕ ಇಟ್ಟುಕೊಳ್ಳುವುದು, ಅಲ್ಲಿನ ಶ್ರೇಷ್ಠ ಕಲಾವಿದರನ್ನು ಇಲ್ಲಿ ಕರೆಸುವುದು ಉತ್ತಮ ಯೋಚನೆಯೇ ಸರಿ. ಆದರೆ ನಮ್ಮ ಕಲೆಯ, ಕನ್ನಡದ ಏಳಿಗೆಗೆ ಅಷ್ಟೇ ಸಾಲದು. ಇಲ್ಲಿಯೂ ಸಾಕಷ್ಟು ಕೃಷಿ ಆಗಬೇಕು.

ಸಮ್ಮೇಳನದ ಮತ್ತೊಂದು ಪ್ರಮುಖ ಆಕರ್ಷಣೆಯೆಂದರೆ ಶಿವರಾಮ ಕಾರಂತರು ಬಂದದ್ದು . ಪ್ರಪಂಚದ ಈಗಿನ ಅತಿ ಉತ್ತಮ ಸಾಹಿತಿಗಳ ಸಾಲಿನಲ್ಲಿ ನಿಲ್ಲುವವರು ಅವರು. ಅವರನ್ನು ಕೇಳುವ ಅವಕಾಶ ಸಿಕ್ಕಿದ್ದು ಸಂತೋಷ, ಆದರೆ ತೃಪ್ತಿಯಾಗಲಿಲ್ಲ , ಅವರಿಗೆ ಸಾಕಷ್ಟು ಕಾಲಾವಕಾಶ ಸಿಕ್ಕಲಿಲ್ಲ . ಆ ಹಿರಿಯ ಸಾಹಿತಿಗೆ ತಕ್ಕ ಸನ್ಮಾನ ಮಾಡುವುದು ಉಚಿತವಾಗಿರುತ್ತಿತ್ತು (ಅವರನ್ನೂ ರಾಜ್ಯ ಸರ್ಕಾರ ಕಳಿಸಿದ್ದರೂ ಸಹ). ಮುಂದಿನ

ಸಮ್ಮೇಳನಗಳಲ್ಲಿ ನಮ್ಮ ಹಿರಿಯ ಸಾಹಿತಿಗಳನ್ನು, ಕಲಾವಿದರನ್ನೂ ಸನ್ಮಾನಿಸುವುದನ್ನು ಒಂದು ಮುಖ್ಯ ಅಂಗವಾಗಿ ಇಟ್ಟುಕೊಳ್ಳುವುದು ಒಳ್ಳೆಯದೆಂದು ಸೂಚಿಸಬಯಸುತ್ತೇವೆ.

ಕವಿ ಸಮ್ಮೇಳನ ಸ್ವಲ್ಪ ತಡವಾಗಿ ಆರಂಭವಾದ್ದರಿಂದ, ಮೊದಲ ಇಬ್ಬರು-ಮೂವರನ್ನು ಬಿಟ್ಟರೆ ಉಳಿದವರಿಗೆ ಸಾಕಷ್ಟು ಕಾಲಾವಕಾಶ ಸಿಕ್ಕಲಿಲ್ಲ. ಈ ಬಗ್ಗೆ ಆ ಕಾರ್ಯಕ್ರಮವನು ನಿರ್ವಹಿಸಿದ ವಸಂತಶ್ರೀಯವರು ತುಂಬ ಇಕ್ಕಟ್ಟಿನಲ್ಲಿ ಸಿಕ್ಕಬೇಕಾಯಿತು. ವಿಜಯಲಕ್ಷ್ಮಿ ನಾಯಕರ ಕವಿತೆಗಳು (ಉದಾ: 'ಬಣ್ಣಗಳು') ಮನಸ್ಸಿಗೆ ಬಹಳ ಹಿಡಿಸಿದುವು. ಮೊದಲ ದಿನ ಮಧ್ಯಾಹ್ನ ನಡೆದ ವಿಚಾರ ವಿನಿಮಯ ಅಧಿವೇಶನವನ್ನು ಮತ್ತೂರು ಕೃಷ್ಣಮೂರ್ತಿಗಳು ತುಂಬ ದಕ್ಷತೆಯಿಂದ ನಿರ್ವಹಿಸಿದರು. ಆದರೆ ಅದರಲ್ಲಿ ಭಾಗವಹಿಸಿದ ಹಲವಾರು ಮಂದಿ ಸಭಿಕರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ಕೊಡಲಿಲ್ಲ. ಇನ್ನೂ ಕೆಲವರು ಜಾಣತನದ, ಅಥವಾ Political ಎನ್ನಬಹುದಾದಂಥ ಉತ್ತರಗಳನ್ನು ಕೊಟ್ಟರು!

ಒಂದು ಸಂತೋಷದ ಸಂಗತಿಯೆಂದರೆ, ಕಾರ್ಯಕ್ರಮಗಳು ನಡೆಯುತ್ತಿದ್ದಾಗ ಜನರೆಲ್ಲ ರಂಗಮಂದಿರದಲ್ಲಿ ಕುಳಿತು, ಗದ್ದಲವಿಲ್ಲದೆ ನೆಮ್ಮದಿಯಿಂದ ಕಾರ್ಯಕ್ರಮಗಳನ್ನೂ ನೋಡಿದ್ದು. (ಅಮೆರಿಕದ ಸಂಘಗಳಲ್ಲಿ ಅಷ್ಟರಮಟ್ಟಿನ ತಾಳ್ಮೆ, ಕೇಳ್ಮೆ ಕಾಣುವುದಿಲ್ಲ. ಅದೊಂದು ಬೇಸರ ತರುವ ವಿಷಯ.) ಊಟದ ವ್ಯವಸ್ಥೆ ಬೇರೊಂದು ಕಟ್ಟಡದಲ್ಲಿ ಇದ್ದುದೂ ಇದಕ್ಕೆ ಸಹಾಯವಾಯಿತು. ಮತ್ತೊಂದು ಸಂತೋಷದ ವಿಷಯವೆಂದರೆ, ಕಾರ್ಯಕರ್ತರೆಲ್ಲ ಕನ್ನಡದಲ್ಲಿ ಭಾಷಣಗಳನ್ನು ಮಾಡಿದ್ದು. ಬಹಳ ಸಲ ನಮ್ಮವರು 'As I cannot speak very well in Kannada .....' ಎಂದು ಮೆಲ್ಲಗೆ ಕನ್ನಡದಿಂದ ಜಾರಿಕೊಂಡು ಕೆಟ ಇಂಗ್ಲಿಷ್‌ನಲ್ಲಿ ಮಾಡುವುದುಂಟು!

ಬಳಗದ ಅಧ್ಯಕ್ಷಿಣಿ ಭಾನುಮತಿಯವರು ಮೆಚ್ಚುವಂಥ ಶಕ್ತಿ ಸಾಮರ್ಥ್ಯವುಳ್ಳವರು. ಬಹಳ ಉತ್ಸಾಹಶಾಲೀವ್ಯಕ್ತಿ ಹಾಗೂ ಭಾವುಕ ವ್ಯಕ್ತಿ ಸಮ್ಮೇಳನ ಯಶಸ್ವಿಯಾಗಿ ನಡೆದು ಹಲವಾರು ತಿಂಗಳ ಸತತ ಪ್ರಯತ್ನ ಕೈಗೂಡಿದಾಗ, ಅವರಿಗೆ ಭಾವೋದ್ವೇಗದಿಂದ ಮುಕ್ತಾಯ ಭಾಷಣ ಮಾಡ ಹೊರಟಾಗ ಗಂಟಲು ಉಬ್ಬಿಬಂತು, ಕಣ್ಣೀರು ಹರಿಯಿತು. ಆ ಉದ್ವೇಗದಲ್ಲಿ ವಂದನಾರ್ಪಣೆಯ ವ್ಯವಸ್ಥೆ ಸ್ವಲ್ಪ ಕಲುಸುಮೇಲಾಯಿತು. ಗೌರವ ಸಲ್ಲಬೇಕಾದ ಹಲವಾರು ಮಂದಿಯ ಹೆಸರುಗಳನ್ನು ಮರೆತಿದ್ದರಿಂದ, ಆ ಮಂದಿಗೆ ಸ್ವಲ್ಪ ನೋವಾಗಿರಬಹುದಾದ್ದು ಸಹಜ. ಆದರೆ ಆ ಸನ್ನಿವೇಶದ ಭಾವೋತ್ಕರ್ಷದಲ್ಲಿ ಆದದ್ದು ಇದು. ಆದ್ದರಿಂದ ಅದನ್ನು ಮನ್ನಿಸಬಹುದು.

ಅಚ್ಚ ಕನ್ನಡದ ಹೆಸರು ಹೊತ್ತು, ಕನ್ನಡಿಗರನ್ನೆಲ್ಲ ನಲ್ಮೆಯಿಂದ ಒಂದೆಡೆ ಸೇರಿಸಿ, ಅವರ ಪರಂಪರೆಯ ವೈಭವವನ್ನು ಮೆರೆಸಿದ ಕನ್ನಡ ಬಳಗಕ್ಕೆ ನನ್ನ ಧನ್ಯವಾದಗಳು. ಈ ಸಂದರ್ಭದಲ್ಲಿ ತಂದ ಸ್ಮರಣ ಸಂಚಿಕೆಯಲ್ಲಿ ಬಳಗದ ಪ್ರಗತಿಯ ಬಗ್ಗೆ ಬರೆಯುತ್ತ ಅರವಿಂದ ಕುಲಕರ್ಣಿಯವರು ಹೇಳುವಂತೆ "........ ಈ ಒಂದು ವಿಶೇಷ ಸಂಧರ್ಭದಿಂದ ದೊರಕುವ ಹರ್ಷ, ಮನಶ್ಶಾಂತಿ ಅನುಭವಿಸಿ ನೋಡಿದಲ್ಲಿ ಅರ್ಥವಾಗುವುದು ಇದಕ್ಕೆ ಯಾವ ಬೆಲೆ ಇತ್ತರೂ ಕಡಿಮೆಯೇ." ಮತ್ತೆ ನಿಮ್ಮನ್ನೆಲ್ಲ ಕಾಣುವ ಸುಯೋಗ ದೊರೆಯಲೆಂದು ಹಾರೈಸುತ್ತೇನೆ.

ಎಚ್.ವೈ. ರಾಜಗೋಪಾಲ್

ಕು॥ ಪ್ರತಿಭಾ ಪ್ರಹ್ಲಾದ್



ಡಾ॥ ವತ್ಸಲಾರಾಮಮೂರ್ತಿ

# ಕನ್ನಡಿಗರ ಕಲಾಸಂಗಮ

1988 ಆಗಸ್ಟ್ ಮಾಹೆ 27–29ರಂದು ಕನ್ನಡಿಗರ ಮನದಲ್ಲಿ ಅಚ್ಚಳಿಯದೆ ನಿಂತಿದೆ.

ಅಂದು ಕರ್ನಾಟಕದಲ್ಲಿ ಹುಟ್ಟಿ ಬೆಳೆದು ಹೊರದೇಶದಲ್ಲಿ ನೆಲೆವಾಸಿಯಾಗಿರುವ ಕನ್ನಡಿಗರು ಮತ್ತು ಕರ್ನಾಟಕದಿಂದ ಬಂದ ಕಲಾಗೋಷ್ಠಿಯವರೂ ಸೇರಿ ನೆರೆದ ಸಭಿಕರಿಗೆ ತಮ್ಮ ಕಲಾಚಾತುರ್ಯ ಪ್ರದರ್ಶನ ಮಾಡಿ, ಎಲ್ಲರ ಮನ ಸೂರೆಗೊಂಡರು ಮತ್ತು ಕಲ್ಲು ಸಕ್ಕರೆಯ ಸವಿಯಂತೆ ಈಗಲೂ ಆಗಾಗ್ಗೆ ಮೆಲುಕು ಹಾಕುವಂತೆ ಮಾಡಿದರು.

ವಿಶ್ವಕನ್ನಡಿಗರ ಸಮ್ಮೇಳನ ಕಾರ್ಯಕ್ರಮ ಮೂರು ದಿನಗಳು ನಡೆದವು. ಕಲಾವಿದರ ಉತ್ಸಾಹ, ಹುಮ್ಮಸ್ಸು ವರ್ಣಿಸಲು ಲೇಖನಿಗೆ ಸಾಧ್ಯವೇ ಇಲ್ಲ. ಮೂರು ದಿನಗಳು ಮೂರು ನಿಮಿಷಗಳಂತೆ ಕಳೆಯಿತು, ಮೂರು ದಿನಗಳ ಮೊದಲ ದಿನ, ದಿವಂಗತ 'ಡಿ.ವಿ.ಜಿ. ಯವರದಿನ'ವೆಂದೂ, ಎರಡನೇ ದಿನ ಕರ್ನಾಟಕದ ಗತ ವೈಭವದ ಕುರುಹಾದ 'ಹೊಯ್ಸಳದಿನ'ವೆಂದೂ, ಮೂರನೇ ದಿನ 'ಕರ್ನಾಟಕೋತ್ಸವ'ವೆಂದೂ ಆಚರಿಸಲಾಯಿತು.

## ಮೊದಲದಿನ 27 ಆಗಸ್ಟ್ 88

'ಡಿ.ವಿ.ಜಿ.'ಯವರ ದಿನ. ಕಾರ್ಯಕ್ರಮವು ಬೆಳಿಗ್ಗೆ ೧೦ ಗಂಟೆಗೆ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಎಸ್.ಆರ್. ಬೊಮ್ಮಾಯಿ ಅವರಿಂದ ವಿಶ್ವಕನ್ನಡಿಗರ ಸಮ್ಮೇಳನ ಉದ್ಘಾಟನೆಯಾಯಿತು.

ಸಮ್ಮೇಳನದ ಕಾರ್ಯಕ್ರಮವು ಶ್ರೀಮತಿ ಪ್ರಕಾಶ್‌ರವರಿಂದ 'ಹಣತೆ' ಬೆಳಗುವುದರ ಮೂಲಕ ಪ್ರಾರಂಭವಾಯಿತು. ಹಣತೆಯ ಮಂದದೀಪ, ನೆರೆದ ಕನ್ನಡಿಗರ ಗುಂಪು, ಭವ್ಯವಾದ ಕಲಾಮಂದಿರ, ಕನ್ನಡಾಂಬೆಯ ಹೆಮ್ಮೆಯ ಮಕ್ಕಳ ಮತ್ತು ಕಲೆಯ ಪಟಗಳು ಎಲ್ಲೆಲ್ಲೂ ತೂಗುಹಾಕಿ ಇಡೀ ಸಭಾಂಗಣ ವೈಭವಪೂರ್ಣವಾಗಿದ್ದಿತು. 'ಹಚ್ಚೇವು ಕನ್ನಡದ ದೀಪ' ಹಾಡಿದ ಡಾ।। ವಸಂತ ಮತ್ತು ಗುಂಪಿನವರ ಗಾನ ಮಾಧುರ್ಯವು ಕಿವಿಗಿಂಪಾಗಿ ಅರ್ಥಪೂರ್ಣವಾಗಿದ್ದಿತು.

ಕುಮಾರಿ ಕವಿತ ಮತ್ತು ಕುಮಾರಿ ತ್ರಿವೇಣಿಯವರು ಕರ್ನಾಟಕದ ಪ್ರಾಚೀನ ಶೈಲಿಯ ಸ್ವಾಗತ ಗೀತೆಯ ಮೂಲಕ ಮೊದಲ ಅಂಕವನ್ನು ಆರಂಭಿಸಿದರು.

ಕನ್ನಡ ಬಳಗದ ಅಧ್ಯಕ್ಷಿಣಿ ಡಾ।। ಭಾನುಮತಿಯವರು ಅತ್ಯಂತ ಗೌರವಪೂರ್ವಕವಾಗಿ ವಿಶ್ವಾಸದಿಂದ, ಸಭಿಕರಿಗೆ ಸುಖಾಗಮನವನ್ನು ಕೋರಿದರು.

ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಎಸ್.ಆರ್. ಬೊಮ್ಮಾಯಿಯವರು ಮತ್ತು ಲಾರ್ಡ್ ಮೇಯರ್ ಪಿ. ಕಾಂಕ್ವೆಸ್ಟ್‌ರವರು ಆರಂಭೋತ್ಸವ ಭಾಷಣವನ್ನು ಚಿಕ್ಕದಾಗಿ ಚೊಕ್ಕವಾಗಿ ಮಾಡಿದರು.

ನಂತರ ವಿಶ್ವಕನ್ನಡಿಗರ ಸಮ್ಮೇಳನದ ಅಂಗವಾಗಿ 'ಕಾವೇರಿ' ಸ್ಮರಣ ಸಂಚಿಕೆಯನ್ನು ಶ್ರೀ ಎಂ.ಪಿ. ಪ್ರಕಾಶ್‌ರವರು ಬಿಡುಗಡೆಮಾಡಿ ಒಂದು ಸ್ವಾರಸ್ಯಕರ ಭಾಷಣ ಮಾಡಿದರು.

ಕಾರಂತರು, ದಿವಂಗತ ಡಿ.ವಿ.ಜಿ.ಯವರ ಭಾವಚಿತ್ರವನ್ನು ಅನಾವರಣ ಮಾಡಿದರು. ಪ್ರಸಿದ್ಧ ನಿವೃತ್ತ ನ್ಯಾಯಾಧಿಪತಿಗಳಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ದಿ।। ಡಿ.ವಿ.ಜಿ.ಯವರ ಬಗ್ಗೆ ಮಾತನಾಡಿದರು. ಡಾ।। ಶಿವರಾಮ ಕಾರಂತರು ಕರ್ನಾಟಕದ ಗತ ವೈಭವ, ರನ್ನ, ಪಂಪ, ಹೊಯ್ಸಳ, ಗಂಗರ ಪ್ರತಾಪಗಳನ್ನು ಹಾಡಿ, ಹೊಗಳಿ ನೆರೆದ ಎಲ್ಲರನ್ನೂ ಸಾವಿರಾರು ವರ್ಷಗಳ ಹಿಂದೆ ಕೊಂಡೊಯ್ದರು. ಈ ಹಿರಿಯ ಸಾಹಿತಿಗಳು ಮಾತನಾಡುತ್ತಿರುವಾಗ ನೆರೆದಿದ್ದವರೆಲ್ಲಾ ತಮ್ಮನ್ನು ತಾವೇ ಮರೆತರು.

ಮಧ್ಯಾಹ್ನದ ಭೋಜನ ನಂತರ ಅಪರಾಹ್ನ 2 ಗಂಟೆಗೆ ಕಾರ್ಯಕ್ರಮ ಇಂಗ್ಲೆಂಡಿನ ಮತ್ತು ಉತ್ತರ ಅಮೇರಿಕದ ಕಲಾವಿದರಿಂದ ಪ್ರಾರಂಭವಾಯಿತು. 'ರಾಮಾಯಣದ ದೃಶ್ಯಗಳು' ಇಂಗ್ಲೆಂಡಿನ ಕಿರಿಯ ಕಲಾವಿದರಿಂದ ಪ್ರದರ್ಶಿಸಲ್ಪಟ್ಟಿತು. ರಾಮಾಯಣದ ಹಿನ್ನಲೆ ದೃಶ್ಯಗಳು, ನಟನಾ ಚಾತುರ್ಯ ಎಲ್ಲರಿಂದ ಪ್ರಶಂಸೆ ಪಡೆಯಿತು. ಉತ್ತರ ಅಮೇರಿಕಾದ ಕಲಾವಿದರು ಅತ್ಯಂತ ಉನ್ನತ ಮಟ್ಟದ ಕಲಾಪ್ರದರ್ಶನವನ್ನು ನೀಡಿದರು. ಭರತನಾಟ್ಯ, ಜಾನಪದ ನೃತ್ಯಗಳು ಮುಂತಾದವು. ತಾವು ಹೊರದೇಶದಲ್ಲಿ ನೆಲೆಸಿದ್ದರೂ ತಮ್ಮ ಊರಿನ ಆಳ ಕಿಂಚಿತ್ತೂ ಕಡಿಮೆಯಿಲ್ಲವೆಂದು ತೋರಿಸಿದರು. ನಂತರ 'ಪ್ರಶ್ನಾವಳಿ' ಅಂದರೆ Open forum ಶ್ರೀ ಎಂ.ಪಿ. ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರೇಕ್ಷಕರು ಅತಿಥಿಗಳಾದ ಮುತ್ತೂರು ಕೃಷ್ಣಮೂರ್ತಿ, ಡಾ।। ಕಾರಂತ್, ಕು।। ಗೀತಾ, ಶ್ರೀ ಜಿ.ಆರ್. ವಿಶ್ವನಾಥ್, ಶ್ರೀ ಶಂಕರ್‌ನಾಗ್, ಶ್ರೀ ಶ್ರೀನಾಥ್, ಮುಖ್ಯಮಂತ್ರಿ ಚಂದ್ರು ಮತ್ತು ಶ್ರೀ ಜಿ.ಹೆಚ್. ಪಟೇಲ್‌ರವರನ್ನು ವಿವಿಧ ಪ್ರಶ್ನೆಗಳನ್ನು ಕೇಳಿದರು. ಕನ್ನಡಿಗರ ಉತ್ಸಾಹ ಕುತೂಹಲ ಮಿತಿಮೀರಿ ಹರಿಯುತ್ತಿತ್ತು. ಮತ್ತು ಚೇತೋಹಾರಿಯಾಗಿ ವಿಚಾರ ವಿನಿಮಯ ನಡೆಯಿತು.

ಕರ್ನಾಟಕದ 'ಏಳರಿಂದ ಹದಿಮೂರು ಶತಮಾನದ ದೇವಾಲಯಗಳ ಶಿಲ್ಪಶಾಸ್ತ್ರ ಎಂಬ ವಿಷಯದ ಮೇಲೆ ಶ್ರೀ ಆಡಂ ಹಾರ್ಡಿಯವರು ಚಲನ ಚಿತ್ರವನ್ನು ಪ್ರದರ್ಶಿಸಿ ನೆರೆದ ಸಭಿಕರಿಗೆ, ಪುರಾತನ ವೈಭವವನ್ನು ಅತ್ಯಂತ ಚಾಕಚಕ್ಯತೆಯಿಂದ ಮನನಮಾಡಿಕೊಟ್ಟರು.

ಮುಸ್ಸಂಜೆಯ ಕಾರ್ಯಕ್ರಮ ಡಾ।। ವಿಜಯಕುಮಾರರ ಇಂಪಾದ ದೇವರನಾಮದಿಂದ ಪ್ರಾರಂಭವಾಯಿತು.

ರಾಜ್ಯ ಸಂಗೀತ ಅಕಾಡಮಿ ವಿಜೇತ ಶ್ರೀ ಅಶ್ವತ್ ಮತ್ತು ವೃತ್ತಿಯಲ್ಲಿ ವೈದ್ಯರಾದ ಡಾ।। ರೋಹಿಣಿ ನಾಗರಾಜ್‌ರವರುಗಳು ಸುಗಮ ಸಂಗೀತವನ್ನು ಹಾಡಿದರು. ತದನಂತರ ನಾಟ್ಯಕಲಾವಿದೆ ಪ್ರತಿಭಾ ಪ್ರಹ್ಲಾದ್‌ರವರು ಅತ್ಯಂತ ನೈಪುಣ್ಯತೆಯಿಂದ ಭರತನಾಟ್ಯ ಪ್ರದರ್ಶಿಸಿದರು. ಇದಾದ ಬಳಿಕ ಶ್ರೀಮತಿ ಶುಭಾನರಸಿಂಹಯ್ಯ ಮತ್ತು ಶ್ರೀ ರಾಮುರವರ ಶಿವತಾಂಡವ ನೃತ್ಯ, ನಾವುಗಳೆಲ್ಲಾ ದೇವಲೋಕದಲ್ಲಿರುವಂತೆ ಭಾಸವಾಯಿತು.

ನಮ್ಮ ಅದೃಷ್ಟವೋ ಎಂಬಂತೆ, ಅಮೆರಿಕಾದಲ್ಲಿ ನೆಲೆಸಿರುವ ಶ್ರೀಮತಿ ಎಲ್.ಜಿ. ವಿಮಲ, (ಇವರ ಹೆಸರನ್ನು ಕರ್ನಾಟಕದಲ್ಲಿ ಕೇಳದವರೇ ಇಲ್ಲ)ರವರು ಆಗಮಿಸಿ ಜಾನಪದ ಮತ್ತು ಭಾವಗೀತೆಗಳನ್ನು ಕರ್ಣಾನಂದವಾಗಿ ಹಾಡಿದರು.

ಯಕ್ಷಗಾನ! ಅದರಲ್ಲೂ ಪುಟಾಣಿ ಮಕ್ಕಳಿಂದ. ಇದು ವರ್ಣಿಸಲು ಅಸಾಧ್ಯ. ಅವರ ಪಾತ್ರಗಳಾದ ಅರ್ಜುನ, ಭೀಮ, ಕೃಷ್ಣ ಮುಂತಾದ ಭಾವಪೂರ್ವಕ ಪಾತ್ರಗಳು ಅವರ ನಟನೆ ಚಾತುರ್ಯವನ್ನು ತೋರ್ಪಡಿಸಿತು.

ಟೆಕ್ಸಾಸ್‌ನಿಂದ ಬಂದ ಶ್ರೀಮತಿ ಸತ್ಯಂ ರೇವತಿಯವರ ಮೋಹಿನಿ ಅಟ್ಟಂ ನೃತ್ಯದೊಂದಿಗೆ ಅಂದಿನ ಅದ್ಭುತ ಕಾರ್ಯಕ್ರಮ ರಾತ್ರಿ ಹನ್ನೊಂದು ಗಂಟೆಗೆ ಮುಗಿಯಿತು.

### ಎರಡನೆಯ ದಿನ 28 ಆಗಸ್ಟ್ '88

'ಹೊಯ್ಸಳ ದಿನ', ಕಾರ್ಯಕ್ರಮವು ಪ್ರಾತಃಕಾಲ 9-30ಕ್ಕೆ ಕರ್ನಾಟಕ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಪಟು, ಗುಂಡಪ್ಪ ವಿಶ್ವನಾಥ್‌ರವರಿಂದ ಸಮ್ಮೇಳನದ ಕ್ರೀಡಾ ಸ್ಪರ್ಧೆಯೊಂದಿಗೆ ಪ್ರಾರಂಭವಾಯಿತು. ಕಿರಿಯ ಮಕ್ಕಳೆಲ್ಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಅತ್ಯಾನಂದಪಟ್ಟರು. ಕಿರಿಯರೆಲ್ಲಾ ಆಟಪಾಠದಲ್ಲಿ ಮುಳುಗಿರುವಾಗ ಮತ್ತೊಂದು ಸಭಾಂಗಣದಲ್ಲಿ ಹಿರಿಯರು ಕವಿಗೋಷ್ಠಿಯಲ್ಲಿ ತಲ್ಲೀನರಾಗಿದ್ದರು. ಇದನ್ನು ಪ್ರೇಕ್ಷಣೀಯವಾಗಿ ಡಾ॥ ರಾಜಾರಾಮ್ ಕಾವಲೆ ಮತ್ತು ಡಾ॥ ಅರವಿಂದ್ ಕುಲಕರ್ಣಿಯವರು ನೆರವೇರಿಸಿದರು. ಈ ಕವಿಗೋಷ್ಠಿಯಲ್ಲಿ ಡಾ॥ ವಸಂತ ಶ್ರೀ, ಡಾ॥ ವಿಜಯಲಕ್ಷ್ಮೀನಾಯಕ್ ಡಾ॥ ನಂದಕುಮಾರ್, ಪ್ರೊಫೆಸರ್ ಚಂದ್ರಯ್ಯ, ಶ್ರೀ ಪಾಟೀಲ್, ಶ್ರೀ ನಾಗರಾಜ್‌ರವರು ಪಾತ್ರವಹಿಸಿ ಕರ್ನಾಟಕ ಸಂಸ್ಕೃತಿ ಪರಂಪರೆಯ ಪರಿಚಯಗಳ ವಿಚಾರವಾಗಿ ವಿಚಾರ ವಿನಿಮಯ ಮಾಡಿದರು.

'ವಿದೇಶದಲ್ಲಿ ಕನ್ನಡ' ಎಂಬ ವಿಷಯದ ಬಗ್ಗೆ ಶ್ರೀ ತಮ್ಮಯ್ಯ ಮತ್ತು ಡಾ॥ ವತ್ಸಲಾ ರಾಮಮೂರ್ತಿಯವರು ವಿವರಿಸಿದರು. ಇದರಲ್ಲಿ ಮುಖ್ಯವಾದ ಕನ್ನಡ ಬಳಗ ಬೆಳೆದು ಬಂದ ಬಗೆ ಮತ್ತು ಅದರದೇ ಆದ 'ಸಂದೇಶ' ಎಂಬ ಪತ್ರಿಕೆಯ ಹಂಚಿಕೆ ಮಾಡಿದರು. ಅದಲ್ಲದೆ ಯು.ಕೆ.ಯ ನಾನಾ ಭಾಗದಲ್ಲಿ ನಡೆಯುತ್ತಿರುವ ಪುಸ್ತಕ ಭಂಡಾರ, ಕನ್ನಡ ಶಾಲೆಗಳು ಎಂಬ ಬಗ್ಗೆ ತಿಳುವಳಿಕೆ ನೀಡಿದರು.

ಇದಾದ ನಂತರ ಮನರಂಜನಾರ್ಥ ನೃತ್ಯತಾರೆ ಹೇಮಾಚೌಧರಿಯವರು ನಾಟ್ಯಪ್ರದರ್ಶನ ಮಾಡಿ ಸಭಿಕರಿಗೆ ನೇತ್ರಾನಂದವನ್ನು ಉಂಟುಮಾಡಿದರು.

ಸುಪ್ರಸಿದ್ಧ ಕವಿ ಡಾ॥ ಶಿವರಾಮ ಕಾರಂತರು ಕರ್ನಾಟಕದ ರಂಗಭೂಮಿ ಎಂಬ ವಿಚಾರವಾಗಿ, ಅದು ಬೆಳೆದು ಬಂದ ಬಗ್ಗೆ , ಅದರ ಅನುಷ್ಠಾನ ಇದರ ಬಗ್ಗೆ ವಿಮರ್ಶಿಸಿದರು.

ಭೋಜನಾನಂತರ ಪಾಶ್ಚಿಮಾತ್ಯ ದೇಶದ ಕಲಾವಿದರು ಮನರಂಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಮ್ಮೇಳನಕ್ಕೆ ಆಗಮಿಸಿದ್ದ ಮುಖ್ಯ ಅತಿಥಿಗಳು ವಸ್ತುಪ್ರದರ್ಶನ ಮತ್ತು ಕಲಾಪ್ರದರ್ಶನವನ್ನು ವೀಕ್ಷಿಸುತ್ತಾ ತಲ್ಲೀನರಾಗಿರುವಾಗ, ಸಭಿಕರಿಗಾಗಿ ರಂಗಮಂಟಪದಲ್ಲಿ ಚಲನಚಿತ್ರ ನಟ, ನಿರ್ದೇಶಕ ಶಂಕರ್‌ನಾಗ್‌ರವರ ಪ್ರಶಸ್ತಿ ವಿಜೇತ 'ಆಕ್ಸಿಡೆಂಟ್' ಕನ್ನಡ ಚಲನಚಿತ್ರವನ್ನು ಪ್ರದರ್ಶಿಸಲಾಯಿತು.

ಕಲಾಪ್ರದರ್ಶನ ಮತ್ತು ವಸ್ತುಪ್ರದರ್ಶನದ ವೀಕ್ಷಣೆಯ ನಂತರ ಮುಖ್ಯ ಅತಿಥಿಗಳಲ್ಲಿ ಒಬ್ಬರಾದ ಶ್ರೀ ಜೆ.ಎಚ್. ಪಟೇಲರು ಒಂದೆರಡು ಮಾತುಗಳನ್ನಾಡಿದರು.

ಸಂಜೆಯ ಕಾರ್ಯಕ್ರಮ ವರ್ಣಿಸಲಸಾಧ್ಯವಾಗಿದ್ದಿತು. ಪ್ರತಿಭಾನ್ವಿತರಿಂದ ಕೂಡಿದ್ದಿತು. ಮೊದಲಿಗೆ ಚಲನಚಿತ್ರ ನಟ ಶ್ರೀನಾಥ್ ಮತ್ತು ಶಂಕರ್‌ನಾಗ್ ವೃಂದದವರು 'ರಸಮಂಜರಿ' ಕಾರ್ಯಕ್ರಮವನ್ನು ಅದ್ದೂರಿಯಾಗಿ ಅರ್ಪಿಸಿದರು. ಇದು ನೇತ್ರಾನಂದವಾದರೆ ಕರ್ಣಾನಂದಕ್ಕಾಗಿ ಸುಪ್ರಸಿದ್ಧ ಗಾಯಕ ಸಿ. ಅಶ್ವಥ್ ಮತ್ತು ಪ್ರತಿಭಾನ್ವಿತ ಗಾಯಕಿ ಡಾ॥ ರೋಹಿಣಿ ನಾಗರಾಜ್‌ರವರು ಕನ್ನಡಿಗರು ಮೆಲುಕು ಹಾಕುವ ಹಾಗೆ 'ರಾಯರು ಬಂದರು ಮಾವನ ಮನೆಗೆ', 'ಬಾಗಿಲನು ತೆರೆದು ಒಳಗೆ ಬಾ ಯಾತ್ರಿಕನೆ' ಮತ್ತು ಮುಂತಾದ ಗೀತೆಗಳನ್ನು ಹಾಡಿ ಸಂತಸ ಉಂಟುಮಾಡಿದರು.

ಪಾಪ ಪುಟಾಣಿಗಳು ಏನು ಮಾಡುತ್ತಾರೆ. ಈ ತರಹದ ಕಾರ್ಯಕ್ರಮದಲ್ಲಿ ಆಸಕ್ತಿ, ಎಲ್ಲಿ ಇರುತ್ತದೆ. ಅದಕ್ಕಾಗಿಯೇ ಈ ಸಮದಯಲ್ಲಿ ಪುಟಾಣಿಗಳಿಗೂ ಆಹ್ಲಾದ ಉಂಟುಮಾಡಲು, ಬುದ್ಧಿಶಕ್ತಿ ಪ್ರದರ್ಶನ, ಮತ್ತು ಆಟಪಾಟ ಮೊದಲಾದ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು .

ಈ ಕಾರ್ಯಕ್ರಮಗಳೊಂದಿಗೆ 'ಹೊಯ್ಸಳ ದಿನ'ದ ಕಾರ್ಯ ಕ್ರಮ ಎಲ್ಲರನ್ನೂ ಮೂರನೇಯ ದಿನದ ಮುಕ್ತಾಯ ಕಾರ್ಯಕ್ರಮದ ಕನಸುಕಾಣುವಂತೆ ಮಾಡಿಬಿಟ್ಟಿತು.

### ಮೂರನೇಯ ದಿನ 29 ಆಗಸ್ಟ್ '88

ಈ ದಿನ ಕರ್ನಾಟಕೋತ್ಸವವು ಸಾರ್ವಜನಿಕರಿಗೆ ಪ್ರವೇಶ ಶುಲ್ಕದ ಮೂಲಕ ಸಾರ್ವಜನಿಕರೆಲ್ಲಾ ಕರ್ನಾಟಕದ ಹಬ್ಬದ ದಿನವನ್ನು ಆಚರಿಸಿ ಸಂತೋಷಪಡಿಸಲೆಂದು ಅಂದು ಬೆಳಿಗ್ಗೆ ಹತ್ತು ಗಂಟೆಗೆ ಕರ್ನಾಟಕದ ಕುಶಲವಸ್ತುಗಳು. ಕೈಮಗ್ಗದ ಬಟ್ಟೆಗಳು, ರೇಷ್ಮೆ ಬಟ್ಟೆಗಳು, ಉಡುಪುಗಳು, ಚರ್ಮದ ಪದಾರ್ಥಗಳು ಪುಸ್ತಕಗಳು ಮೊದಲಾದವುಗಳ ವಸ್ತುಪ್ರದರ್ಶನದ ಆನಂದವನ್ನು ಸವಿಯುತ್ತಿರುವಾಗಲೆ, ಬಾಯಿ ನೀರೂರಲೆಂದು ಕರ್ನಾಟಕದಲ್ಲಿ ತಯಾರಾದ ತಿಂಡಿತಿನಿಸುಗಳ ಗಮ ಗಮ ವಾಸನಾದ್ಯಂತ ಆಕರ್ಷಣೆ, ಎಲ್ಲರೂ ಮೆಚ್ಚುವಂತಾಗಿದ್ದಿತು. ಇದರ ಮಾರಾಟ ವರ್ಣಿಸಲಸಾಧ್ಯ. ಮನರಂಜನಾರ್ಥ ಕರ್ನಾಟಕದ ಕಿರಿಯರಿಂದ ಯಕ್ಷಗಾನ ನಾಟಕವಿದ್ದಿತು. ಇದಾದ ನಂತರ ನೃತ್ಯ ನಾಟಕ, ಶಾಸ್ತ್ರೀಯ ನೃತ್ಯ ಮತ್ತು ಲಘು ಸಂಗೀತಗಳನ್ನು ಅರ್ಪಿಸಲಾಗಿದ್ದಿತು. ಬಂದ ಸಾರ್ವಜನಿಕರಿಗೆಲ್ಲಾ 'ಭಾರತ ಚಹ' ಸವಿಯನ್ನು ಉಂಟುಮಾಡಿತು. ಇದೆಲ್ಲವೂ ಒಂದು ಅಚ್ಚಳಿಯದಂತಾಯಿತು.

ಈ ಮೂರು ದಿನದ ವಿಶ್ವಕನ್ನಡ ಸಮ್ಮೇಳನ ಪ್ರಬಂದ ಎಲ್ಲೆಡೆ ನೆಲೆಸಿರುವ ಕನ್ನಡ ಜನತೆಗೆ ಒಂದು ಚರಿತ್ರಾರ್ಹ ದಿನ.

ಇದರ ನೆನಪು ಅಳಿಸಲಾಗದ್ದು .

**ಜೈ ಕನ್ನಡಾಂಬೆ**
**ಮೊಳಗಿಸು ಕನ್ನಡ ದಿಂಡಿಮ!!!!**

# ಅಭಿಪ್ರಾಯಗಳು

..............Sammelana's basic aim is to preserve and promote the historic, cultural and ethnic heritage of Karnataka, specially among the younger generation.

The events will include lectures on the past, present and future of Karnataka.

The organisers are pleased to have a panel of dignitaries from all walks of life in Karnataka.

**—Glossop Chronicle, 26-8-88**

........ವ್ಯಾಂಚೆಸ್ಟರ್ ಮೇಳಕ್ಕೆ ಜನಸ್ಪಂದನ........ಯುನೈಟೆಡ್ ಕಿಂಗ್‌ಡಂ. ಕನ್ನಡ ಬಳಗದ ನೇತೃತ್ವದಲ್ಲಿ ನಡೆದ ವಿಶ್ವ ಕನ್ನಡಿಗರ ಸಮ್ಮೇಳನ, ವಿದೇಶೀ ಕನ್ನಡಿಗರ ಯುವ ಪೀಳಿಗೆಗೆ ತಮ್ಮ ತಾಯಿನಾಡಿನ ವೈಭವ, ಸಂಸ್ಕೃತಿ, ಪರಂಪರೆಯ ಪ್ರಥಮ ಪರಿಚಯ ಒದಗಿಸುವುದರಲ್ಲಿ ಯಶಸ್ವಿಯಾಯಿತು.

**ಸಂಯುಕ್ತ ಕರ್ಣಾಟಕ 5-9-88**

"ನಿಮ್ಮ ಊರಿಗೆ ಬಂದಾಗ ಕನ್ನಡ ಬಳಗದ ನೀವು ನಿಮ್ಮ ಸಂಗಾತಿಗಳು ಸಲಿಸಿದ ಆತಿಥ್ಯ, ಆದರಗಳಿಗೆ ತೀರ ಕೃತಜ್ಞತೆಗಳು ನಿಮ್ಮೆಲ್ಲರ ನೆನಪು ದೀರ್ಘಕಾಲ ಉಳಿಯುವಂಥದು.

**—ಶಿವರಾಮ ಕಾರಂತ್, 5-9-88**

....................'It is a great pleasure that you dedicated one day's Programme in the memory of DVG by unveiling his portrait by Dr. Shivaram Karanth .............. DVG's compositions were Rendered by the participants ..

**—Nittoor Srinivasa Rao**

........ಐದು ವರುಷಗಳ ಹಿಂದೆ ರೂಪಿಸಲ್ಪಟ್ಟ ನಿಮ್ಮ ಬಳಗ ಇಂತಹ ದೊಡ್ಡ ಸಮ್ಮೇಳನ ನಡೆಸಿತು ಎನ್ನುವುದು ಬಹಳ ಹೆಮ್ಮೆಯ ವಿಚಾರ. ನಿಮ್ಮೊಂದಿಗೆ ಇದ್ದಷ್ಟು ಕಾಲ ಸಂಭಂದಿಕರೊಬ್ಬರ ಮದುವೆ ಮನೆಯಲ್ಲಿದ್ದಂತೆ ತೋರಿತು. ಬಳಗದ ಸದಸ್ಯರು ತೋರಿದ ಆತ್ಮೀಯ, ಆದರ, ಆತಿಥ್ಯ, ಮರೆಯಲಾಗದು.

**ಶ್ರೀಧರ ಹಂಡೆ**

..............I thank the Balaga for having made the Manchester-weekend so memorable and unique. Memories linger.


**—Shankar Nag**

................''Wonderful trip that we can never forget in our life''.

**—C. Ashwath**

ಯಾರು ಯಾರು, ಏನು ಏನು —ಎಂಬ ಪರಿಚಯಕ್ಕೆ ಸರಿಯಾದ ಅವಕಾಶ ಕಲ್ಪಿಸಬೇಕಿತ್ತು. ಕರೆದವರಿಗೆ— ತಾವು ಏನನ್ನು ಬಯಸಿದ್ದೇವೆ—ಎಂಬ ಅರಿವು ಬೇಕು. ಅಲ್ಲಿಗೆ ಹೋದವರಿಗೆ ಯಾಕೆ ಬಂದಿದ್ದೇವೆ—ಎಂಬ ಅರಿವೂ ಬೇಕು. ಅದಕ್ಕಾಗಿ ಸಭೆ, ಚರ್ಚೆ ನಡೆಯಬಹುದಿತ್ತು. ಭರತನಾಟ್ಯವನ್ನು—ಅಮೆರಿಕದವರು, ಇಂಗ್ಲೆಂಡಿನವರು ಕರ್ನಾಟಕದವರು ಪ್ರದರ್ಶಿಸಿದ್ದರಿಂದ ಅದು ಸಾಧಿಸಲಾರದು! ಊಟ, ಉಪಚಾರಗಳು ಬೇಕೇ ಬೇಕಾದರೂ—ಅವು ಸರ್ವಸ್ವವಲ್ಲ. ಅದಕ್ಕಾಗಿ ಲಕ್ಷಾಂತರ ರೂಪಾಯಿಗಳು ವ್ಯಯವಾಗಬೇಕಿಲ್ಲ.


**—ಶಿವರಾಮ ಕಾರಂತ್**



ಔತಣಕೂಟ ಏ. ಎಂ. ವಿಠ್ಠಲಮೂರ್ತಿ ಪ್ರೊ॥ ರಾಧಾಕೃಷ್ಣ ಮತ್ತು ಎಂ. ಪಿ. ಪ್ರಕಾಶ್



ಡಾ॥ ಅಪ್ಪಾಜಿಗೌಡ, ಡಾ॥ ಜಯಚಂದ್ರ, ಗಣ್ಯರನ್ನು ಸ್ವಾಗತಿಸುತ್ತಿರುವುದು.



ಸಿ. ಹೆಚ್. ಎಸ್. ರಾವ್ ಮತ್ತು ಎಂ. ದಿವಾಕರ್ ಅತಿಥಿಗಳೊಂದಿಗೆ

ಕರ್ನಾಟಕೋತ್ಸವ ದಿನದಂದು "ಫ್ಯಾಷನ್ ಶೋ"



# DELEGATES FROM SWITZERLAND

MR. N.R. VENKATESH
MRS. SUJATHA VENKATESH (P.A.)
MISS. DIVYA VENKATESH

# DELEGATES AND ARTISTS OF U.K.

DR. ABHAYAMBA MURTHY
MR. L. AGALGATTI
MRS. VIJAYA AGALGATTI
JYOTI AGALGATTI
SUNIL AGALGATTI
MR. S.N. AHMED
MR. JOWER AHMED
DR. D. AJITH KUMAR
MRS. SHANTA KUMAR
SRUTI GIRI KUMAR
MR. G. ANAND
MRS. TARA ANAND
KARTHIK ANAND
MR. T.S. ANAND
MR. ARUN
DR. B.K. ANIL
DR. A. APPAJI
MRS. PRABHAVATHY APPAJI
ABHISARA (P.A.)
ANIKETHANA (P.A.)
DR. APPAJI GOWDA
DR. K.S. BANUMATHI
NAYAN GOWDA (P.A.)
KIRAN GOWDA (P.A.)
DR. P.S. BABU
MRS. PRATHIBA BABU
MR. V.D. BADIGER
MRS. SHAKUNTALA BADIGER
REKHA BADIGER
SHEELA BADIGER
MR. L.J. BAGALI
DR. BALAKRISHNAPPA
MRS. SAVITHRI BALIKA
SHILPA BALIKA
AMAR BALIKA
MR. BELGAUMKUR
Dr. P.V. BELGAUMKUR
MR. RAMESH BELLUR
MRS. RADHA BELLUR
VIDYA BELLUR
VIVEK BELLUR
DR. A.D. BHADRI
DR. H. BIJAPUR
MRS. GIRIJA BIJAPUR
MOHAN BIJAPUR
JEEVAN BIJAPUR
KRISHNAVENAMMA
MR. S.K.R. BOLAR
MRS. SHARAD BOLAR
CHITRALEKA BOLAR
MR. K.C. CARIAPPA
DR. K.S. CHENGAPPA
MRS. G. CHENGAPPA
MR. RATHNA CHENGAPPA (P.A.)
DR. R.R. CAVALE
MRS. PADMA CAVALE
NAVEEN CAVALE
GOWRI CAVALE
MR. U. CHANDRASEKHAR
MRS. NANDHINI CHANDRASEKHAR
DR. K. CHANDRASHEKAR
SUSHMA CHANDRASHEKAR
DR. GOPALAN
CHAYA GOPALAN
VARSHA GOPALAN
RUDRAPPA CHITHRIKI
SHEILA CHITHRAIKI
DEEPA CHITHRIKI
MR. S.P. DESAI
DR. VANI DESAI
CHETHAN DESAI
DEEPTI DESAI
DR. V.C. DEVAKUMAR
MRS. PUSHPA DEVAKUMAR
VINODH
SUPREENA
DR. D.M. DEVARAJ
MRS. SHYLAJA DEVARAJ
KIRAN DEVARAJ
DR. B. DUMMA
MRS. PRABHA DUMMA
NATASHA
DR. A.B. DWARAKANATH
MRS. GEETHA DWARAKANATH
ASHA
DIPAK
MR. B.N. GADADHARA
MRS. LEELA GADADHARA
NIKHIL
SUNIL
DR. D.H. GANAPATHI
MRS. SHIRLEY GANAPATHI
DR. SHREEGOWRI GINIMAV
MISS KATHYA NADIG
PRAFUL GINIMAV
MEGHARAJ GINIMAV
DR. PRABHURAJ GINIMAV (P.A.)
MRS. SHANTHA GINIMAV (P.A.)
RANIRUPAMATHI GINIMAV
SUMATHI ANURADHA GINIMAV
DR. GOPAL RAO
MRS. NARMADA G. RAO
DR. U.K.N. GOUD
MRS. MANJULA GOUD
HEMA
DR. V. HARIPRASAD
MRS. SWARNA HARIPRASAD
LAKSHMI HARIPRASAD
DR. M. HIREKODI
MRS. SHANTHA HIREKODI
ROOPA
DEEPA
MR. E.N. IYENGAR
DR. MYTHILI IYENGAR (P.A.)
SUJATHA
DR. S.V. JAGADEESH
MRS. SUMANGALA JAGADEESH
SURAKSHITHA JAGADEESH
DR. S.G. JAGADISHCHANDRA
MRS. KUSUMA JAGADISHCHANDRA
MR. V. JAGANNATH
DR. PRAMILA JAGANNATH
VIDYA
SOWMYA
MRS. JAYA GOWDA
MRS. SNEHA SHETTY
MRS. S.P. RAO
RAGHU
DR. C.R. JAYACHANDRA
MRS. SUJAYA JAYACHANDRA
DR. B.U. JAYADEVA
DR. ARUNDATHI JAYADEVA
CHETAN JAYADEVA
DR. C.S. JAYAKUMAR
MRS. INDU JAYAKUMAR
MR. N.M. JAYAKUMAR (P.A.)
LATHA (P.A.)
UMA KANTHA (P.A.)
DR. M. JAYARAM
MRS. SURENU JAYARAM
TRISHUL (P.A.)
SHUKRUTHI
MR. A.N. JOYIS
MR. ARVIND JOYIS
MR. C.P. KUMARA SWAMY
MR. G. KALGHATGI
MRS. M. MALATHI KANBUR
DR. K. KOLAR
MRS. HANSA KOLAR
MALAPPA KOLAR
KUMAR KOLAR
NIKHIL KOLAR
MR. B. KONNUR
MR. MATHOOR KRISHNAMURTHY
MRS. RAJALAKSHMI KRISHMURTHY
DR. M.N. NANDAKUMARA (P.A.)
MRS. JANAKI NANDAKUMARA (P.A.)
DR. R.S.S. KRISHNAMURTHY
MRS. ROSILY KRISHNAMURTHY
SUMA
SMITHA
DR. SURESH KUDARI
MRS. VYJAYANTHI KUDARI
VINUTHA
CHETHAN
MAHESH
DR. A.S. KULKARNI
DR. SNEHA KULKARNI
AVINASH (P.A.)
ANJANA (P.A.)
DR. G.R. KULKARNI


DR. A.G. KULKARNI
RUTUJA
SANDEEP
MR. M.A. KULKARNI
MRS. MEGHANA KULKARNI
MONICA
DEPIKA
MRS. SHEILA KULKARNI
MISS MICHALLE
MR. V.S. KUMAR
MRS. V. KUMAR
DR. V.C.B. KUMAR
MRS. MUMTHA KUMAR
VINAYA
MR. H. RAJU
MRS. RAJU
DR. K. VIJAY KUMAR (P.A.)
MRS. SHASHI KUMAR (P.A.)
MASTAR R. KUMAR
DR. R.N. KUMAR
MRS. MANJULA KUMAR
ROOPA KUMAR
SANDEEP KUMAR
DR. S.V. KUMARASWAMY
MRS. KUMARASWAMY
MRS. VEERAPPAIAH
DR. PARAMESH KUNA
DR. KOTESHWARI KUNA
JYOTI KUNA
REKHA
LATHA
DR. C.C. KURAVATTI
MRS. PREMA KURAVATTI
PALLAVI
MRUTHYUNJAYA
DR. LAKSHMAN
DR. KOUSALYA LAKSHMAN
DR. T.H. LAXMI
MRS. M. LAXMI
MISS LAXMI
MISS A. LAXMI
MISS S. LAXMI
MR. R. LAXMI
DR. V.G. LOKARE
MRS. K.V. LOKARE
MR. S. MAHADEVAIAH
MR. N.H. MAHINDRAKAR
MR. GURU MALLESH
MRS. VASUNDHARA MALLESH
DR. MANNI
MRS. GEETHA MANNI
DR. NATARAJU
DR. MEGHARAJ
MRS. MEGHARAJ
RAGINI
SAPNA
ADARSH
DR. S.B. MURNAL
MRS. JANET MURNAL
SARAH
KATHERINE MURNAL
MR. RAMAMURTHY
MRS. SEETHA R. MURTHY
SANJAY
JYOTSNA
DR. A. MYLARI

MRS. A. MYLARI
NITHUS MYLARI
DR. R. MYSORE
MRS. SUJTHANA MYSORE
VINAY KUMAR MYSORE
DR. R. NAGARAJ
DR. NAGENDRA RAO
MRS. NAGENDRA RAO
DR. R.K. NAIK
MRS. ASHA NAIK
ANJALI NAIK
ARJUN NAIK
MR. NARASIMHAN
MRS. MOHANA NARASIMHAN
SRICHAR
SHOBA
DR. B.L. NARAYANA
MRS. PRATHIMA NARAYANA
MADHU NARAYANA
MEENA
DR. C. NATARAJA
MRS. USHA NATARAJA
MEERA
RAJEEV
DR. P.V. NATH
MRS. SATYAVATHI NATH
MISS CHANDRIKA NATH
MISS ROOPA SETTY
DR. PRAKASH NAYAK
MRS. KUMUDA NAYAK
PUNDALIK
PUSHPAK
DR. VIJAYALAXMI NAYAK
REKHA
DR. M.R. NETAJI
MRS. SHEELA NETAJI (P.A.)
SAURABH
DR. S. PALLEGAR
MRS. GEETHA PALLEGAR
ANAND (P.A.)
AJAY (P.A.)
DR. M.R. PAMPAPATHI
MRS. MANJULA PAMPAPATHI
VINAY KUMAR PAMPAPATHI
MAMATHA PAMPAPATHI
RAJESH PAMPAPATHI
DR. SURESH PATHAR
MRS. SHILA PATHAR
MR. PATIL
MRS. PATIL
DR. POBBATHI
MRS. VIJAYA POBBATHI (P.A.)
MRS. JAYAMMA POBBATHI
KALYANI POBBATHI
MR. K. RAGHUNANDAN
MRS. SAMIDHENI RAGHUNANDAN
ADITYA (P.A.)
MR. A.C. RAJ
MR. KORI S. RAJ
MRS. PRABHA RAJ
DR. M.S. RAJSHEKAR
MRS. LALITHA RAJSHEKAR
VIJAY
DR. RAMAMURTHY
VATHSALA RAMAMURTHY
ASHVIN RAMAMURTHY (P.A.)

TONY RAMAMURTHY (P.A.)
DR. M. RAMANNA
MRS. SULOCHANA RAMANNA
MAHESH
DR. N.S. RAMASWAMY
MRS. KUMUDA RAMASWAMY
MR. C.H.S. RAO
LEELA RAO
SHEILA RAO (P.A.)
SUKHEENA RAO (P.A.)
MISS GAYATHRI RAO
MR. PAUL DESOUZA
DR. SRIDHAR
DR. K.P. RAO
DR. C.R. RAVINDA
MRS. VIJAYA RAVINDRA
NAVINA
SUVINA
MR. L.R. REDDY
DR. M.H. REDDY
DR. T.N. REDDY
MRS. SHAMANTAHA REDDY
SUNDEEP REDDY
DR. KRISHNA REDDY
MRS. SHOBHA REDDY
DR. M.S. SALESHWAR
MRS. VIJAYALAXMI SALESHWAR
KARUNA SALESHWAR
PRASHANT SALESHWAR
DR. S. SANIKOP
MRS. SHAKUNTHALA SANIKOP
SEEMA SANIKOP
SUNIL
DR. SARNOPAT
MRS. SARNOPAT
MR. M.C. SATHYANARAYANA
MRS. NAGARATHNA SATHYANARAYANA
DR. R.S.S. SETTY
MRS. CHANDRA A. SETTY
SUMA (P.A.)
HEMA SETTY (P.A.)
DR. R.S. RAJARATHNA SETTY
MRS. GEETHA R. SETTY
MEERA SETTY (P.A.)
THARA SETTY (P.A.)
DR. SHAMBULINGAPPA
DR. RATHNA UGAARGOL
MUTHHU
SIDDESH
DR. SHETTAR
MRS. VEENA SHIGGAON
MRS. D.V. SHIGGAON
MR. SRIPADA RAO
MRS. JYOTHI SRIPADA RAO
DR. M.U. SIDDEEQ
VIJAYA SIMHA
MALATHI SIMHA
VIMAL SIMHA
DR. S.N. SREENATH
MRS. LEELA SREENATH
SHILPA
MAJOR P.M. SREENIVASA RAO
DR. SRINIVASA
MRS. SRINIVASA
DR. S. SREENIVASAN




ಸಮ್ಮೇಳನದ ಮುಕ್ತಾಯ ಅಧಿವೇಶನದ ಸಂದರ್ಭದಲ್ಲಿ ಪಾಲ್ಗೊಂಡಿದ್ದ ಕಲಾವಿದರು ಮತ್ತು ಪ್ರತಿನಿಧಿಗಳು.




ಸಮ್ಮೇಳನದಲ್ಲಿ ಯು.ಕೆ. ಕನ್ನಡ ತರುಣರು.



ಸಮ್ಮೇಳನದ ಗಣ್ಯ ಅತಿಥಿಗಳಿಗೆ ಯು.ಕೆ. ಕನ್ನಡ ಬಳಗದ ತರುಣಿಯರಿಂದ ಸ್ವಾಗತ.





ಮೆಂಚೆಸ್ಟರ್‌ನ ಲಾರ್ಡ್‌ಮೇಯರ್ ಪೆಟ್ರೀಷಿಯ ಕಾನ್‌ಕ್ವೆಸ್ಟ್ ಮುಖ್ಯಮಂತ್ರಿ ಶ್ರೀ ಬೊಮ್ಮಾಯಿ ಅವರಿಗೆ ವಾರ್ತಾ ಇಲಾಖೆ ನಿರ್ದೇಶಕ ಶ್ರೀ ಎಸ್. ಕೃಷ್ಣಮೂರ್ತಿ ಅವರು ವಸ್ತುಪ್ರದರ್ಶನದ ಬಗ್ಗೆ ವಿವರಣೆ ನೀಡುತ್ತಿರುವುದು.

'ಕರ್ನಾಟಕದ ರಂಗಭೂಮಿ'ಯ ಬಗ್ಗೆ ಶ್ರೀ ಶಿವರಾಮಕಾರಂತರಿಂದ ಉಪನ್ಯಾಸ.

ಡಿ.ವಿ.ಜಿ. ಅವರ ಕೃತಿಗಳ ಬಗ್ಗೆ ಶ್ರೀ ನಿಟ್ಟೂರು ಶ್ರೀನಿವಾಸರಾಯರಿಂದ ಭಾಷಣ.



ವೇದಿಕೆಯ ಮೇಲೆ ಯೋಗಾಚಾರ್ಯ ಶ್ರೀ ಬಿ. ಕೆ. ಎಸ್. ಅಯ್ಯಂಗಾರ್ ಮತ್ತು ಹಿಂದೆ ಬಳಗದ ಖಜಾಂಚಿ ಶ್ರೀಮತಿ ಸುರೇಣು ಜಯರಾಂ.

